# ಮರಳಿ ಹೋದಳು ಕರಿಷ್ಮಾ!



ಬಾಲಿವುಡ್‌ನಲ್ಲಿ ಇವತ್ತು ಕರೀನಾ ಕಪೂರ್ ಏರಿದ್ದಕ್ಕಿಂತಲೂ ಎತ್ತರಕ್ಕೆ ಏರಿದಾಕೆ ಅವಳ ಅಕ್ಕ ಕರಿಷ್ಮಾ. ಕಪೂರ್ ವಂಶದ ಹೆಣ್ಣುಮಕ್ಕಳು ಬೆಳ್ಳಿತೆರೆಗೆ ಪ್ರವೇಶಿಸುವುದನ್ನು ಕುಟುಂಬದ ಹಿರಿಯರು ವಿರೋಧಿಸುತ್ತಿದ್ದ ಸಂದರ್ಭದಲ್ಲೇ ಸಿನಿಮಾ ಎಂಟ್ರಿ ಪಡೆದವಳು ಕರಿಷ್ಮಾ. ಇವತ್ತು ಕರೀನಾಗೆ ನಂಬರ್ ಒನ್ ಸ್ಥಾನಕ್ಕೆ ಇರುವ ಪೈಪೋಟಿಗಿಂತಲೂ ಹೆಚ್ಚು ಪೈಪೋಟಿ ಕರಿಷ್ಮಾಗಿತ್ತು. ಆದರೆ ಆಕೆ ಎಲ್ಲವನ್ನೂ ಎದುರಿಸಿ ನಂಬರ್ ಒನ್ ಪಟ್ಟ ಗಿಟ್ಟಿಸಿದವಳು. ಚಿತ್ರಜೀವನ ಉತ್ತುಂಗದಲ್ಲಿ ಇದ್ದಾಗಲೇ 2003ರಲ್ಲಿ ಕರಿಷ್ಮಾ ಮದುವೆಯಾಗಿ ಗಂಡನ ಮನೆಗೆ ಹೋದಳು. ದೆಹಲಿ ಮೂಲದ ಉದ್ಯಮಿ ಸಂಜಯ ಕಪೂರ್ ಜತೆ ಆಕೆಯ ವಿವಾಹ ವಿಜೃಂಭಣೆಯಿಂದ ನಡೆಯಿತು. ಬಾಲಿವುಡ್‌ನ ತಾರೆಯರೆಲ್ಲ ಬಂದು ಕ್ಯೂ ನಿಂತು ಹರಸಿದರು. ಮೊದಲ ಮಗು ಆಗುವವರೆಗೆ ಇಬ್ಬರೂ ಸಂತೋಷದಿಂದಲೇ ಇದ್ದರು.

ಆದರೆ ತನ್ನ ಗಂಡನಿಗೆ ದೆಹಲಿಯ ಶ್ರೀಮಂತ ಹುಡುಗಿಯೊಬ್ಬಳ ಜತೆ ಅಫೇರ್ ಇದೆ ಎನ್ನುವ ಸಂಶಯ ಕಾಡಿದ ಕರಿಷ್ಮಾ, ಗಂಡನ ಜತೆ ಜಗಳಕ್ಕೆ ನಿಂತಳು. ಇಬ್ಬರ ನಡುವಣ ಮನಸ್ತಾಪ ಬಹಿರಂಗವೂ ಆಯಿತು. ಇನ್ನೇನು ಇಬ್ಬರೂ ಬೇರೆಯಾಗುತ್ತಾರೆ ಎನ್ನುವಾಗ ಕರಿಷ್ಮಾ ಮತ್ತೆ ಗರ್ಭಿಣಿ ಎಂಬ ಸುದ್ದಿ ಬಂತು. ಆದರೆ ಹೆರಿಗೆಯ ಬಳಿಕ ಇಬ್ಬರು ಮಕ್ಕಳಾದ ಸಮೈರಾ ಮತ್ತು ಕಿಯಾನ್‌ರನ್ನು ಕಟ್ಟಿಕೊಂಡು ಕರಿಷ್ಮಾ ಮುಂಬೈಗೆ ವಾಪಸಾದಳು.

ಅದಾಗಿ ಈಗ ಒಂದು ವರ್ಷವೇ ಕಳೆದಿದೆ. ಕರಿಷ್ಮಾ ಡೈವೋರ್ಸಿಗೂ ಅರ್ಜಿ ಸಲ್ಲಿಸಿದ್ದಳು. ಆದರೆ ಕಳೆದ ವಾರ ಅದೇನಾಯಿತೋ ಗೊತ್ತಿಲ್ಲ, ಗಂಡ ಹೆಂಡಿರ ನಡುವೆ ರಾಜಿಯಾಗಿದೆ ಎನ್ನುವ ಸುದ್ದಿ ಬಂತು. ಕರಿಷ್ಮಾ ಮಕ್ಕಳ ಜತೆ ಗಂಡನ ಮನೆಗೆ ಹೋಗಿ 4–5 ದಿನ ಇದ್ದು ಬಂದಿದ್ದಾಳೆ. ಅಲ್ಲಿ ಗಂಡ ಮಕ್ಕಳ ಜತೆ ಫೋಟೊ ಹೊಡೆಸಿಕೊಂಡು, ಖುಷಿಯಿಂದ ಕಾಲ ಕಳೆದು ಆ ಫೋಟೊಗಳನ್ನು ಲಂಡನ್ನಿನಲ್ಲಿದ್ದ ತಂಗಿ ಕರೀನಾಳಿಗೂ ಕಳಿಸಿಕೊಟ್ಟಿದ್ದಾಳೆ.

'ಕರಿಷ್ಮಾ ಹಳೆಯದೆಲ್ಲವನ್ನೂ ಮರೆತಿದ್ದಾಳೆ. ಅದೂ ಅಲ್ಲದೆ ಆಕೆಯ ಗಂಡನ ಗರ್ಲ್‌ಫ್ರೆಂಡ್ ಕೂಡಾ ಈಗ ದೂರವಾಗಿದ್ದಾಳೆ. ಇನ್ನೇನಿದ್ದರೂ ಶುಭಂ...' ಎಂದು ಕರಿಷ್ಮಾ ನಿಕಟವರ್ತಿಗಳು ತಿಳಿಸಿದ್ದಾರೆ. ರಾಜಾ ಹಿಂದೂಸ್ತಾನಿಯ 'ಪರ್‌ದೇಶೀ ಪರ್‌ದೇಶೀ ತು ಜಾನಾ ನಹೀ..' ಎನ್ನುವ ಹಾಡು ನಿಮಗೆ ನೆನಪಾದರೆ ಅದು ನಮ್ಮ ತಪ್ಪಲ್ಲ!

■ ಬಿಂದು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65


